ತೀರಿಕೊಂಡಾಗ ನಾನೂ ಹಿಂಗs ಒಂದು ಹಳ್ಳೀ ಊರಾಗ ಇದ್ದೆ. ಅವರು ಹಾವೇರ್ಯಾಗ ಇದ್ದರು. ಮಣ್ಣಿನ ಹೊತ್ತಿಗೆ ಹೋಗಬೇಕಂತ ಎಷ್ಟು ಕಷ್ಟಪಟ್ಟರೂ ಸಾಧ್ಯ ಆಗಲಿಲ್ಲ. ಎರಡೂ ಸಲಾನೂ ಮಣ್ಣು ತಪ್ಪಿತು. ಎಷ್ಟು ದುಃಖ ಆತು ಅಂತೀರಿ? ನಿಮ್ಮ ಕಥಿಯೋಳಗೆ ನನಗ ಆವಾಗ ಆಗಿದ್ದ ದುಃಖಿಕ್ಕ ಬಾಯಿs ಕೊಟ್ಟಂಗನಿಸಿ ಆಶ್ಚರ್ಯ ಆತು. ಓದಿ ಅತ್ತುಬಿಟ್ಟೆ. ಮೂರು–ನಾಲ್ಕು ದಿನ ಅವರದೇ ಗುಂಗು ಹಿಡದಂಗಾಗಿತ್ತು... ಹತ್ತು ಕಥೀ ಬರಿಯೂದಕ್ಕಿಂತ ಮುತ್ತಿನಂತಾ ಇಂತಾದೊಂದು ಕಥಿ ಬರೀಬೇಕು ನೋಡ್ರಿ... ಅದನ್ನ ಓದಿದಾಗ ನೀವು ಸಾಕಷ್ಟು ವಯಸ್ಸಾದವರು ಇರಬೇಕು ಅಂತ ಅಂದುಕೊಂಡಿದ್ದೆ. ಈಗ ನೋಡಿದರ, ಇನ್ನೂ ನನ್ನ ಸಣ್ಣ ಮಗನಕ್ಕಿಂತಾ ಚಿಕ್ಕವರು. ಈ ವಯಸ್ಸಿನಾಗs ಇಂಥಾ ಅನುಭವ. ಇಂಥಾ ತಿಳಿವಳಿಕೆ ಅಂದರ... ಎಲ್ಲಾ ದೇವರ ದೇಣಿಗಿ...'

ಮುದುಕ ಮತ್ತೆ ಅದೇ ಜಾಡಿಗೆ ತಿರುಗಿ ಬಂದ. ಅವನ ಮಾತಿನಲ್ಲಿ ಭಾವುಕತೆ ಬಂದಿತ್ತು. ಹೊಗಳಿಕೆ, ಉತ್ಪ್ರೇಕ್ಷೆಗಳಂತೂ ಸರಿಯೇ. ದೇಶಾವರಿ? ಬಹುಶಃ ಅವನು ಈವರೆಗೆ ಬರಿ ನೆಲ ಹದ ಮಾಡಿಕೊಳ್ಳುವ ಕೆಲಸ ಮಾಡಿದ್ದ. ಇನ್ನು ಗುರಿಗೆ ಬರಬೇಕು. ಇನ್ನೇನು ಬಂದಾನು. ಅದೇ ಪರಿಚಿತವಾದ ವಿನ್ಯಾಸ. ದೇಶಾವರಿ ಕಲೆಯ ವಿವಿಧ ಹಂತಗಳನ್ನು ಅವನು ನಿಧಾನವಾಗಿ ಏರತೊಡಗಿದ್ದ. ಬಲೆಯನ್ನು ಕಲಾತ್ಮಕವಾಗಿ ಹರಡತೊಗಿದ್ದ. ಮುದುಕನ ಬಗ್ಗೆ ಜುಗುಪ್ಸೆಯಾಯಿತು. ಭಯವಾಯಿತು. ಅವನ ಬಲೆಯಿಂದ ತಪ್ಪಿಸಿಕೊಳ್ಳುವುದು ಹೇಗೆಂದು ತೋಚದೆ ಚಡಪಡಿಸಿದೆ. ಬರಬರುತ್ತ ನನ್ನ ತಾಳ್ಮೆ ತೀರುತ್ತ ಬಂತು. ಆ ಗಿಡ್ಡ ಸೊಳಕ್ಯಾ ಮುದುಕನ ಮೇಲೆ ಸಿಟ್ಟು ಬರತೊಡಗಿತು.

ಒಂದು ಸಲ ಅನಿಸಿತು: ಈ ಮುದುಕ ತನ್ನ ಉದ್ದೇಶದ ಕೊನೆಯ ಹಂತಕ್ಕೆ ಬರುವ ಮುಂಚೆಯೇ ಅವನ ಕೈಯಲ್ಲಿ ಒಂದು ಹತ್ತು ರೂಪಾಯಿಯ ನೋಟು ಇಟ್ಟು ಇಲ್ಲಿಂದ ಹೊರಟುಬಿಡಬೇಕು. ಅವನು ಬೀಸುತ್ತಿದ್ದ ಬಲೆಯಲ್ಲಿ ಗೊತ್ತಿದ್ದೂ ಇದ್ದೂ ಸಿಕ್ಕು ಸೋಲುವುದಕ್ಕಿಂತ ಇದು ಹೆಚ್ಚು ಗೌರವಯುತವಾದ ಮಾರ್ಗ. ಮುದುಕಾ, ಯಾಕ ಸುಮ್ಮನs ತ್ರಾಸು ತಗೋತಿ? ನಿನಗೇನು ಬೇಕ ಅಂತ ನನಗ ಗೊತ್ತು. ಇಕಾ ಹಿಡಿ, ಹೊರಡು ಇಲ್ಲಿಂದ...

ಇನ್ನೊಂದು ಸಲ ಅನಿಸಿತು: ನೋಡ್ರಿ ಯಜಮಾನರ, ನೀವು ಇಷ್ಟೆಲ್ಲಾ ಸುತ್ತಾಡಿ ಸುತ್ತಾಡಿ ಎಲ್ಲಿಗೆ ಬರತೀರಿ ಅಂತ ನನಗ ಗೊತ್ತೈತೆ. ನಾನು ನಿಮಗ ಒಂದು ಪೈಸೇನೂ ಕೊಡೂದುಲ್ಲ. ಸುಮ್ಮನs ತ್ರಾಸು ತಗೋಬ್ಯಾಡ್ರಿ– ಎಂದು ನಿಷ್ಠುರವಾಗಿ ಹೇಳಿ ಅಲ್ಲಿಂದ ಹೊರಟುಬಿಡಬೇಕು. ಇವನದೇನು ಬಿಢೆ ನನಗೆ? ಎಲ್ಲಿಯವನೋ ಏನು ಕಥೆಯೊ! ಯಾರ್ಯಾರೋ ಸಂಬಂಧವಿಲ್ಲದ ಭಿಕಾರಿಗಳು ಕೂಡ ನನ್ನನ್ನು ಇಷ್ಟು ಸುಲಭವಾಗಿ ಮರುಳು ಮಾಡಿ ಆಕ್ರಮಿಸಿಕೊಳ್ಳಲು ಯಾಕೆ ಬಿಡುತ್ತೇನೆ? ಇದೆಲ್ಲಿಯ ದೌರ್ಬಲ್ಯ?

ಅಷ್ಟರಲ್ಲಿ ಕೌಂಟರಿನ ಬಾಗಿಲು ತೆರೆಯಿತು. ಕಾರಕೂನ ತಿರುಗಿ ಬಂದಿದ್ದ. ಅವನಿಗಾಗಿ ಕಾಯುತ್ತಿದ್ದ ನಾಲ್ಕೈಂಟು ಜನ ಓಡಿಹೋಗಿ ಸಾಲಿನಲ್ಲಿ ನಿಂತುಕೊಂಡರು. ಪಾರಾದೆ ಎಂದುಕೊಂಡು ಹೇಳದೆ ಕೇಳದೆ ನಾನೂ ಅವಸರದಿಂದ ಎದ್ದು ಹೋಗಿ ಸಾಲಿನಲ್ಲಿ ಸೇರಿಕೊಂಡುಬಿಟ್ಟೆ.

ಗೌರಿಯೂ ನನ್ನನ್ನು ಹಿಂಬಾಲಿಸಿ ಬಂದಳು. ಮುದುಕ ಆಕೆಯನ್ನು ಅಲ್ಲೇ ಉಳಿಸಿಕೊಳ್ಳಲು ಯತ್ನಿಸಿದ. ಬಹುಶಃ ನಾನು ಟಿಕೀಟು ತೆಗೆಸುವುದಾದ ಮೇಲೆ ಮತ್ತೆ ಇವನು ನನ್ನನ್ನು ಹಿಡಿದುಕೊಳ್ಳುತ್ತಾನೋ ಎಂದು ಕಸಿವಿಸಿಯಾಯಿತು. ಆದರೆ ಪುಣ್ಯಕ್ಕೆ ಗೌರಿ ಅವನ ಬಳಿ ನಿಲ್ಲಲಿಲ್ಲ. ತಾನೂ ಬಂದು ನನ್ನ ಹತ್ತಿರ ನಿಂತುಕೊಂಡಳು.